ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3774

2. ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)

3. ಉತ್ತರಿಸುವ ಸಚಿವರು : ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು)

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮ ಗಳಾವುವು; ರಾಜ್ಯದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕೇಂದ್ರವು ಎಲ್ಲೆಲ್ಲಿದೆ;	ರಾಜ್ಯದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. * ಆರೋಗ್ಯ ರಕ್ಷಣೆ * ಕಾರ್ಪೆಟ್ ನೇಯ್ಗೆ ತರಬೇತಿ * ಯಾಂತ್ರೀಕೃತ ಉಣ್ಣೆ ಕಟಾವಣೆ ತರಬೇತಿ * ಆಧುನಿಕ ಕುರಿ ಸಾಕಾಣಿಕೆಯಲ್ಲಿ ತರಬೇತಿ * ತಳಿ ಅಭಿವೃದ್ಧಿ * ಕುರಿ ಸಾಕಾಣಿಕೆದಾರರ ಸಹಕಾರ ಸಂಘಗಳ ಸ್ಥಾಪನೆ * ಉಣ್ಣೆ ಸಂಗ್ರಹಣಾ ಗೋದಾಮುಗಳ ಸ್ಥಾಪನೆ * ಸಮಗ್ರ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ (ಐ.ಎಸ್.ಡಬ್ಲ್ಯೂ.ಡಿ.ಓ) * ಕರ್ನಾಟಕದಲ್ಲಿ ಕುರಿ ಅಭಿವೃದ್ಧಿಗಾಗಿ ಅಮಚಿನ ಹಣದ ಯೋಜನೆ * ಮೇಕೆ ಸಂವರ್ಧನಾ ಕೇಂದ್ರಗಳ ಸ್ಥಾಪನೆ * ಬಂಡೂರು ತಳಿ ಕುರಿಗಳ ಸಂರಕ್ಷಣೆ * ಕುರಿ ಮತ್ತು ಉಣ್ಣೆ ಉತ್ಪನ್ನಗಳಿಗೆ ವೈಜ್ಞಾನಿಕ ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿ ಯೋಜನೆ

ಪ್ರಶ್ನೆ	ಉತ್ತರ
	* ವಿಸ್ತರಣೆ, ಶಿಕ್ಷಣ, ತರಬೇತಿ ಮತ್ತು ಪ್ರಚಾರ * ಪಶುಸಂಗೋಪನೆ ಇಲಾಖೆಯ 3774 ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಆರೋಗ್ಯ ರಕ್ಷಣೆ, ರೋಗ ನಿರೋಧಕ ಲಸಿಕೆ ಮತ್ತು ಜಂತುಹುಳು ನಾಶಕ ಔಷಧಿ ನೀಡುವ ಕಾರ್ಯಕ್ರಮ * ವಿವಿಧ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕುರಿ ಘಟಕಗಳ ಅನುಷ್ಠಾನ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ 6 ಕುರಿ ಸಂವರ್ಧನಾ ಕ್ಷೇತ್ರಗಳು 2 ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು ಮತ್ತು 14 ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳು ಹಾಗೂ ಪಶುಸಂಗೋಪನೆ ಇಲಾಖೆಯ 55 ಕುರಿ ಮತ್ತು ಉಣ್ಣೆ ಅಭಿವೃದ್ಧಿ ಉಪ ಕೇಂದ್ರಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳ ವಿವರ ಅನುಬಂಧ–1ರಲ್ಲಿ ನೀಡಲಾಗಿದೆ.

ಅನುಬಂಧ–1

ಪ್ರಶ್ನೆ ಸಂಖ್ಯೆ: 3774

ಕ್ರ.ಸಂ.	ಜಿಲ್ಲೆ	ಉಪಕೇಂದ್ರಗಳು
1	ಹಾಸನ	**ಚನ್ನರಾಯಪಟ್ಟಣ ತಾಲೂಕು** 1. ಜನಿವಾರ 2. ಸುಂಡಹಳ್ಳಿ 3. ತಗಡೂರು 4. ಎಂ.ಶಿವರ 5. ಬಿದರೆ 6. ನೇರಲಕೆರೆ 7. ಕಾರೆಹಳ್ಳಿ 8. ಬೆಳಗಿಹಳ್ಳಿ 9. ತೋಟ 10. ಕುರಿ ಪೋಷಕರ ಸಂಘ

ಕ್ರ.ಸಂ.	ಜಿಲ್ಲೆ	ಉಪಕೇಂದ್ರಗಳು
2.	ಬಿಜಾಪುರ	**ಬಿಜಾಪುರ ತಾಲ್ಲೂಕು** 1. ಬಿಜಾಪುರ 2. ಕನಮಡಿ 3. ತಿಕೋಟ 4. ಜಾಲಗೇರಿ 5. ಓಬಳೇಶ್ವರ 6. ಮದಬಾವಿ 7. ಬಾಬಾನಗರ 8. ಕನ್ನೂರ
3.	ಬಳ್ಳಾರಿ	**ಹೊಸಪೇಟೆ ತಾಲ್ಲೂಕು** 1. ಹೊಸಪೇಟೆ 2. ಮರಿಯಮ್ಮನಹಳ್ಳಿ 3. ಬೈಲಪ್ಪದ್ದಗೇರಿ 4. ಗಾದಿಗನೂರು 5. ತೋರಣಗಲ್ಲು 6. ಕುಡತಿನಿ 7. ಕೊಪ್ಪಳ 8. ಗಿಣಗೇರಾ
4.	ಗುಲ್ಬರ್ಗಾ	**ಯಾದಗಿರಿ ತಾಲ್ಲೂಕು** 1. ಗಾಜರಕೋಟೆ 2. ಗಣಪೂರ 3. ಮಿನಾಸಪುರ **ಶಹಾಪೂರ ತಾಲ್ಲೂಕು** 1. ಖಾನಾಪುರ 2. ಮುದ್ದಕಿ 3. ದರ್ಶನಪುರ ಜೇವರ್ಗಿ ತಾಲೂಕು 4. ಯಲಗೋಡ

ಕ್ರ.ಸಂ.	ಜಿಲ್ಲೆ	ಉಪಕೇಂದ್ರಗಳು
5	ಮಂಡ್ಯ	ನಾಗಮಂಗಲ ತಾಲ್ಲೂಕು 1. ತಟ್ಟೆಕೆರೆ 2. ದೊಡ್ಡಜಂಟನಹಳ್ಳಿ 3. ಬಿಂಡನಹಳ್ಳಿ 4. ಚೀಣ್ಯ 5. ಳಾಳನಕೆರೆ 6. ಸಾತೇನಹಳ್ಳಿ 7. ಮೆಣಸಗೆರೆ ಮಳವಳ್ಳಿ ತಾಲೂಕು 1. ದಾಸನದೊಡ್ಡಿ 2. ದೊಡ್ಡಬಳವಳ್ಳಿ 3. ಬೆಂಡರವಾಡಿ 4. ಚಿಕ್ಕಮುಳ್ಳಗೋಡು 5. ಬೆಟ್ಟಕೊಪ್ಪಲು 6. ಉಲ್ಲಹಳ್ಳಿ 7. ಬಾಣಸಮುದ್ರ 8. ನಿಟ್ಟೂರು
6.	ಚಿತ್ರದುರ್ಗ	ಹೊಸದುರ್ಗ ತಾಲೂಕು 1. ಎಂ ಜಿ ದಿಬ್ಬ 2. ಬಾಗೂರು 3. ಹೆಬ್ಬಳ್ಳಿ 4. ಕಾರೇಹಳ್ಳಿ 5. ಕಬ್ಬಳ 6. ದೊಡ್ಡತೇಕಲವಟ್ಟಿ 7. ಲಕ್ಕಿಹಳ್ಳಿ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ನಿಯಂತ್ರಣದಲ್ಲಿ 2 ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು ಕಾರ್ಯನಿರ್ವಹಿಸುತ್ತಿದ್ದು ವಿವರ ಈ ಕೆಳಕಂಡಂತೆ ಇದೆ.

1. ಕೋಲಾರ : ಶಹಾಪುರ, ಬಡಮಾಕನಹಳ್ಳಿ, ತಾಯಲೂರು

2. ರಾಣಿಬೆನ್ನೂರು : ಮೆಡ್ಲೇರಿ, ಐರಣಿ, ದೇವರಗುಡ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ರುವಂತಹ ಕುರಿಗಳ ಸಂಖ್ಯೆ ಎಷ್ಟು? ಇದು ಹಾಸ್ಯವಾಗಿ ಇರಬಹುದು, ಆದರೆ ಇದು ಬಹಳ ಪ್ರಾಮುಖ್ಯವಾದದ್ದು,

ಶ್ರೀ ಜೆ.ಸಿ.ಮಾಧುಸ್ವಾಮಿ : ಐದು ಕೋಟಿ ಚಿಲ್ಲರೆ ಇದೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೇ, ಜಾನುವಾರುಗಳ ಕಮಿಟಿ ಆಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಒಟ್ಟು ಐದೂವರೆ ಕೋಟಿ ಕುರಿಗಳು ಇವೆಯೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವೆಲ್ಲಾ ಅವರೇ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನ ಎಡ, ಬಲ ಕುಳಿತಿ ರುವವರು ಮಂತ್ರಿಗಳಲ್ಲ. ನಾನು ಸರ್ಕಾರವನ್ನು ಕೇಳುತ್ತಾ ಇದ್ದೇನೆ. ಕರ್ನಾಟಕ ರಾಜ್ಯದಲ್ಲಿ ಕುರಿಗಳ ಸಂಖ್ಯೆ ಎಷ್ಟು? ಎಂದು ನಾನು ನೇರವಾಗಿ ಕೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಾವು ಗೊತ್ತಿರುವಂತಹ ವಿಚಾರವನ್ನು ಕೇಳುತ್ತೀದ್ದಿರೆಂದು ನಾವು ಹೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಇದನ್ನು ಸ್ಪಷ್ಟಪಡಿಸಬೇಕು. ಇದರ ಜೊತೆಗೆ ಎರಡನೆಯ ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚೆ, ಯಾವ ಪ್ರದೇಶದ ಕುರಿಗಳ ಮಾಂಸ ರುಚಿಯಾಗಿದೆ.

ಅಧ್ಯಕ್ಷರು : ಈಗ ಎಲ್ಲಾ ಕುರಿಗಳನ್ನು ಕೊಯ್ಯಿಸಿ, ನಮ್ಮ ಮುಂದೆ ಇಡುತ್ತಾರೆ. ನೀವು ಅದರ ರುಚಿಯನ್ನು ನೋಡಿ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಯವರನ್ನು ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ಈಗ ಮಾನ್ಯ ಅಧ್ಯಕ್ಷರು, ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಆಮೇಲೆ ಅವರಿಗೆ ಸಮಜಾಯಿಸಿ ಹೇಳುತ್ತೇನೆ. ಈಗ ಮಾನ್ಯ ಮಂತ್ರಿ ಯವರು ದಯವಿಟ್ಟು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ

ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು ಕೇಳಿರುವಂತಹ ಪ್ರಶ್ನೆ, ಕುರಿಗಳ ಸಂಖ್ಯೆ ರಾಜ್ಯದಲ್ಲಿ ಎಷ್ಟು ಇದೆಯೆಂದು ಕೇಳಿದ್ದಾರೆ. ಈ ಕುರಿಗಳ ಸಂಖ್ಯೆ 72 ಲಕ್ಷದ 56ಸಾವಿರ ಇದೆ. ಇವು ಇದುವರೆಗೂ ಇರುವಂತಹದ್ದು. ಈ ಕುರಿಗಳಲ್ಲಿ ಯಾವ ಮಾಂಸ ರುಚಿಯಾಗಿದೆಯೆಂಬ ಪ್ರಶ್ನೆಯನ್ನು ಕೇಳಿದರು. ಅದಕ್ಕೆ ನಾನು ಎರಡು, ಮೂರು ಸ್ಯಾಂಪಲ್ ಅನ್ನು ಕಳುಹಿಸುತ್ತೇವೆ. ಅವರು ಯಾವುದನ್ನು ಸೆಲೆಕ್ಟ್ ಮಾಡುತ್ತಾರೋ, ಅದನ್ನೆ ಪಾಸು ಮಾಡುತ್ತೇವೆ. ನಮ್ಮ ಕಡೆ ತಧನಿ, ಮತ್ತು ರಾಂಬೂಲ್ ಚೆಚ?? ಆಸ್ಟ್ರೇಲಿಯನ್ ಎಂದು ಹೊಸದಾಗಿ ತಳಿ ಮಾಡುತ್ತಿದ್ದೇವೆ. ಅದು ಬಿಟ್ಟರೆ ಚಳ್ಳಕೆರೆಯಲ್ಲಿ ಫಾರ್ಮರ್ಸ್‌ಗೆ ಸಪ್ಲೈ ಮಾಡುವಂಥದ್ದು, ಹೊಸ ಟೆಕ್ನಾಲಜಿ ಪ್ರಕಾರ ಒಂದು ಫಾರಂ ಅನ್ನು ಮಾಡಿದ್ದೇವೆ. ಇದರ ಪ್ರಕಾರ ಈ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮವನ್ನು ಡೆವಲಪ್‌ಮೆಂಟ್ ಮಾಡುವ ವಿಚಾರದಲ್ಲಿ ಇದನ್ನು ನೆಗ್‌ಲೆಟ್ ಮಾಡಿಕೊಂಡು ಬಂದಿದ್ದರು. ಈ ವರ್ಷ ಏನಾಗಿದೆಯೆಂದರೆ, ನಾನು ಕಳೆದ ವರ್ಷ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ರಿಕ್ವೆಸ್ಟ್ ಮಾಡಿಕೊಂಡು, ಈಗ ಇದಕ್ಕೆ 3ಕೋಟಿ ರೂಪಾಯಿಗಳು ಅಡಿಷನಲ್ ಆಗಿ ತೆಗೆದುಕೊಂಡು, ಈಗ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡು, ನಾವು ಡೆವಲಪ್‌ಮೆಂಟ್ ಮಾಡುವಂಥದ್ದು ಮಾಡುತ್ತಿದ್ದೇವೆ. ಈಗ ತಾವು ಸಹ ಕೂಡ ಇದರ ಬಗ್ಗೆ ಏನಾದರೂ ಸಲಹೆಗಳು ಇದ್ದರೆ ಹೇಳಿ. ನಾವು ಅದನ್ನು ಡೆವಲಪ್ ಮಾಡುವುದಕ್ಕೆ ಏನು ಆ್ಯಕ್ಷನ್ ತೆಗೆದುಕೊಂಡು ಕೆಲಸವನ್ನು ಮಾಡುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನು ಅಧ್ಯಕ್ಷರೇ,; ಈ ರಾಜ್ಯದಲ್ಲಿ ಕುರಿ ಮಾಂಸಕ್ಕೆ ಒಂದು ವೆರೈಟಿಯನ್ನು ಡೆವಲಪ್ ಮಾಡಿತು, ಉಣ್ಣೆಗೆ ಒಂದು ವೆರೈಟಿಯನ್ನು ಡೆವಲಪ್ ಮಾಡಿತು. ಇಲ್ಲಿ ಕುರಿ ಮಾಂಸದ್ದು ಅಲ್ಲದೇ, ಉಣ್ಣೆ ಡೆವಲಪ್ ಮಾಡಿದ್ದರಲ್ಲಿ ಕುರಿ ಸಾಕಾಣಿಕೆ ಸಹಕಾರ ಸಂಘಗಳು ಮಾಡಿತು. ಈ ಯಾವುದೇ ಸಹಕಾರ ಸಂಘಗಳು ಇವತ್ತು ಕೆಲಸವನ್ನು ಮಾಡುತ್ತಿಲ್ಲ. ಇದು ಎಲ್ಲಾ ನಿಷ್ಕ್ರಿಯವಾಗಿದೆ. ತಾವು ಒಂದು ಟೈಮ್ ಗ್ರಾಂಟ್ ಕೊಟ್ಟಿದ್ದು ಅದು ಕಳೆದ ಸಲ ಕೊಟ್ಟಿದ್ದು. ಅದು ಅವರು ಹೇಳಿದಂತೆ ಕನ್‌ಕರೆಂಟ್ ಗ್ರಾಂಟ್ ಅಲ್ಲ. ಒಂದು ಸಲ ಅದನ್ನು ಕಳೆದ ಸಲ ಬಜೆಟ್‌ನಲ್ಲಿ ಕೊಟ್ಟಿದ್ದು, ಅದನ್ನು ಕ್ಲೋಸ್ ಮಾಡಿದ್ದಾರೆ. ಇವತ್ತು ಯಾವುದೇ ಸಹಕಾರ ಸಂಘಕ್ಕೆ ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಇವರು ಮೊದಲು ಏನು ಕುರಿ ಸಹಕಾರ ಸಂಘಕ್ಕೆ 3ಲಕ್ಷ, 5ಲಕ್ಷ, ರೂಪಾಯಿಗಳೆಂದು ಏನು ಕೊಟ್ಟರು. ಅದೆಲ್ಲ ಮುಳುಗಿಸಿ ಇಡೀ ರಾಜ್ಯದಲ್ಲಿ ಕುರಿ ಮತ್ತು ಕುರಿ ಉತ್ಪನ್ನಗಳ ಸಹಕಾರ ಸಂಘಗಳು ಒಂದೂ ಕೆಲಸವನ್ನು ಮಾಡುತ್ತಾ ಇಲ್ಲ. ಈ ಸಹಕಾರ ಸಂಘಗಳಿಂದ ಬಂದಂತಹ ಉಣ್ಣೆಯನ್ನು ಅವರು ಫೆಡರೇಷನ್ ಅನ್ನು ಮಾಡಿಕೊಂಡು ಕೊಂಡು ಕೊಳ್ಳಬೇಕಾಗಿತ್ತು ಇವತ್ತು

ಉಣ್ಣೆಯನ್ನು ತೆಗೆಯುವವರು ಇಲ್ಲ. ಕುರಿ ಸಾಕಿರುವವರು ಉಣ್ಣೆ ಕಟ್ಟು ಮಾಡಿ ಸಿದರೆ, ಏನು ಮಾಡಬೇಕೆಂಬುದು ಗೊತ್ತಿಲ್ಲ. ಈ ಕಂಬಳಿ ಉದ್ಯಮಗಳು ನೂರಕ್ಕೆ ನೂರು ನಿಷ್ಕ್ರಿಯವಾಗಿ ಬಿಟ್ಟಿದೆ. ಆ ಉಣ್ಣೆಯನ್ನು ಏನು ಮಾಡುತ್ತೀರಿ, ಕಟ್ಟು ಮಾಡುವಂತಹ ಉಣ್ಣೆಯನ್ನು ಏನು ಮಾಡುತ್ತೀರಿ, ಜಿಲ್ಲಾ ಮಟ್ಟದಲ್ಲಿ ಒಂದೊಂದು ಫೆಡರೇಷನ್‌ಗಳನ್ನು ಮಾಡಿದ್ದೀರಿ. ಅವುಗಳು ಏಕೆ ನಿಷ್ಕ್ರಿಯವಾಗಿದೆ. ಇದನ್ನು ತಾವು ಹೇಳಬೇಕು. ಇನ್ನು ಎರಡನೆಯದಾಗಿ ಎಸ್.ಎಲ್.ಬಿ.ಪಿ. ಪ್ರೋಗ್ರಾಂ ಏನಾಯಿತು? ಇದು ಎಲ್ಲಿಗೆ ಬಂತು. ಇದು ಹೊಸದುರ್ಗದಿಂದ ಚಳ್ಳಕೆರೆಯವರೆಗೆ ಇಟ್ಟುಕೊಂಡಿದ್ದು ಕಾರ್ಯಕ್ರಮ ನೂರಕ್ಕೆ ನೂರು ನಿಂತುಹೋಗಿದೆ. ಇಲ್ಲಿ ಮಾತಿಗೆ 72 ಲಕ್ಷ ಕುರಿಗಳು ಇವೆ. ಇಲ್ಲಿ ಬಂಡೂರು ಕುರಿಯನ್ನು ಮಾಂಸಕ್ಕೆ ಮಾಡಿದ್ದು. ಅದನ್ನು ಅವರು ಏನು ಹುಡುಗಾಟಕ್ಕೆ ಹೇಳಲಿಲ್ಲ. ನೀವು ಹೇಳಿದ ಎರಡು ವೆರೈಟಿಯನ್ನು ಉಣ್ಣೆಗೋಸ್ಕರ ಮಾಡಿದ್ದು. ಈ ಕಡೆ ಬಂಡೂರು ತಳಿಯು ನಾಶವಾಗಿದೆ. ಆ ಕಡೆ ನಾಶವಾಗಿರುವಂಥಹದ್ದನ್ನು ಅಭಿವೃದ್ಧಿ ಮಾಡುವಂಥದ್ದು ಇನ್ನು ಮೂರನೆಯದಾಗಿ ಆ ಕುರಿಗಳಿಗೆ ಬರುತ್ತಿರುವಂತಹ ಖಾಯಿಲೆಗೆ ಫ್ರೀಯಾಗಿ ವ್ಯಾಕ್ಸಿನ್ ಅನ್ನು ಕೊಡಿಸುತ್ತೀರಾ? ಎಂದು ಕೇಳುತ್ತೇನೆ. ಈ ಸೊಸೈಟಿಗಳನ್ನು ನೀವು ಹೇಗೆ ಪುನಶ್ಚೇತನ ಮಾಡುತ್ತೀರಿ? ಎಂಬುದನ್ನು ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈಗ ಉಣ್ಣೆ ಸಹಕಾರ ಸಂಘಗಳು 151ಇದೆ, 120 ಸಂಘಗಳು ಕೆಲಸ ಮಾಡುತ್ತಿವೆ. ಇವೆಲ್ಲಕ್ಕೂ ಅಂದರೆ 120 ಸಂಘಗಳಿಗೆ 10,000ರೂಪಾಯಿಗಳ ಗ್ರಾಂಟ್ ಕೊಟ್ಟಿದ್ದೇವೆ. ಇದನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಕೊಟ್ಟಿದ್ದೇವೆ. ಈ 120ಸಂಘಗಳು ಏನು ಇದೆ. ಒಂದೊಂದು ಕೇಂದ್ರದಲ್ಲೂ 40 ಜನ ಬೆನಿಫಿಶರಿಗಳಿಗೆ ಟ್ರೈನಿಂಗ್ ನ್ನು ಕೊಡುವುದು. ಅವರಿಗೆ ತಿಂಗಳಿಗೆ 500 ರೂಪಾಯಿಗಳಂತೆ ಸ್ಯಾಲರಿ ಎಂದು ಕೊಡುವಂಥದ್ದು. ಇಂಥ ಸ್ಕೀಂಗಳನ್ನು ಇಟ್ಟುಕೊಂಡಿದ್ದೇವೆ, ಮತ್ತು ಇನ್‌ಫ್ರಾಸ್ಟ್ರಕ್ಚರ್ 2ಕೋಟಿ ರೂಪಾಯಿಗಳು ಖರ್ಚು ಮಾಡಿದ್ದೇವೆ. ಇದರಿಂದ ಬೆನಿಫೀಶರಿಸ್‌ಗಳು ಮುಂದೆ ಬರುತ್ತಿದ್ದಾರೆ. ನಾವು ಹೊಸ ಟೆಕ್ನಾಲಜಿಯನ್ನು ಅಲ್ಲಿ ಅಡಾಪ್ ಮಾಡಿದ್ದೇವೆ. ಉಣ್ಣೆಯ ಸಲುವಾಗಿ ಮಾಡಿದ್ದೇವೆ. ಇನ್ನು ಸೊಸೈಟಿಗಳು ಏನು ಕೆಲಸ ಮಾಡುತ್ತಿಲ್ಲ, ಮುಚ್ಚಿ ಹೋಗಿವೆ. ಅಂಥಾದ್ದನ್ನು ಪುನಃ ಆರಂಭ ಮಾಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ಪ್ರಮುಖವಾಗಿ ಬಂಡೂರು ತಳಿ ತಯಾರು ಮಾಡುವುದಕ್ಕೆ, ಅದನ್ನು ಬೆಳವಣಿಗೆ ಮಾಡುವುದಕ್ಕೆ ತಾವು ಯಾವ ಯಾವ ರೀತಿಯಲ್ಲಿ ಸಹಕಾರವನ್ನು ಮಾಡುತ್ತಿದ್ದೀರಿ. ಅದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ತಯಾರು

ಆಗುವಂತಹ ಉಣ್ಣೆಯ ಪ್ರಮಾಣ ಎಷ್ಟು? ಇದು ವಿದೇಶಕ್ಕೆ ರಫ್ತಾಗುವುದು ಎಷ್ಟು? ಇದನ್ನು ತಾವು ತಿಳಿಸಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕೋಲಾರದಲ್ಲಿ ಈ ಬಂಡೂರು ತಳಿಯ 3ಸೆಂಟರ್‌ಗಳು ಇವೆ. ಅವುಗಳು ಶಹಪುರ, ಕಡಮಾಕನ ಹಳ್ಳಿ, ತೈಲೂರು, ಇವು ಅ ಮೂರು ಸೆಂಟರ್‌ಗಳು ಇವೆ.

ರಾಣಿಬೆನ್ನೂರಿನಲ್ಲಿ ಮೆಡ್ಲೇರಿ, ಐರಣಿ ಮತ್ತು ದೇವರಗುಡ್ಡಗಳಲ್ಲಿ ಮೂರು ಕೇಂದ್ರಗಳಿವೆ. ಹೀಗೆ, ಒಟ್ಟು ಆರು ಕೇಂದ್ರಗಳಿವೆ. ಬಂಡೂರು ವೆರೈಟಿಗಳನ್ನು ಮಾಡುವಂಥ ಈ ಆರು ಕೇಂದ್ರಗಳಿವೆ. ಉಣ್ಣೆ ಎಲ್ಲಿಗೆ ಎಕ್ಸ್‌ಪೋರ್ಟ್ ಆಗುತ್ತದೆ, ಎಷ್ಟು ಆಗುತ್ತದೆ ಎಂದು ಕೇಳಿದರು. ಆ ಮಾಹಿತಿ ಈಗ ಕರೆಕ್ಟಾಗಿ ನಮ್ಮ ಕಡೆ ಇಲ್ಲ. ಲೋಕಲ್ ಮಾರ್ಕೆಟ್‌ನಲ್ಲಿ ಸೇಲ್ ಮಾಡುವಂಥದ್ದರ ಬಗ್ಗೆ ಬೇಕಾದರೆ ಇನ್‌ಫಾರ್ಮೇಷನ್ನನ್ನು ನಾನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಮುಂದಿನ ತಿಂಗಳು ಒಂದು ಕುರಿಗರ ಸಮ್ಮೇಳನವನ್ನು ಕರೆಯಬೇಕೆಂದು ಮಾಡಿದ್ದೇವೆ. ತಾವು ಇದಕ್ಕೇನಾದರೂ ಸಹಾಯ ಮಾಡುವಿರಾ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ : ಖಂಡಿತವಾಗಿ, ಅವರು ಈ ಸಮ್ಮೇಳನವನ್ನು ಎಲ್ಲಿ ಮಾಡುತ್ತಾರೆ, ಯಾವಾಗ ಮಾಡುತ್ತಾರೆ ಎಂದು ತಿಳಿಸಿದರೆ ಅದಕ್ಕೆ ನಾವು ಪೂರ್ಣ ಸಹಕಾರ ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಮ್ಮ ಪ್ರಶ್ನೆ ಅವರಿಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಾವೂ ಗಮನಿಸಲಿಲ್ಲವೆಂದು ಕಾಣುತ್ತದೆ. ನನ್ನ ಪ್ರಶ್ನೆ ಏನೆಂದರೆ, ಈ ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆ ಕುಸಿದು ಬಿದ್ದಿದೆ. ಎಲ್ಲವನ್ನೂ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಕರ್ನಾಟಕ ರಾಜ್ಯ ಕುರಿಗರ ಸಮ್ಮೇಳನವನ್ನು ಮಾಡಲಿದ್ದೇವೆ. ಅದಕ್ಕೆ ತಮ್ಮ ಇಲಾಖೆಯ ಮೂಲಕ ಹಣದ ಸಹಾಯವನ್ನು ಮಾಡುವಿರೇ ಎಂದು ಕೇಳುತ್ತಿದ್ದೇವೆ.

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ : ಆ ಸಮ್ಮೇಳನದಲ್ಲಿ ನಿಮ್ಮ ಜೊತೆ ನಾವೂ ಭಾಗವಹಿಸುತ್ತೇವೆ.

ಅಧ್ಯಕ್ಷರು : ಆ ಸಮ್ಮೇಳನದಲ್ಲಿ ನಿಮ್ಮ ಜೊತೆ ಅವರೂ ಭಾಗವಹಿಸುತ್ತಾರಂತೆ ಬಿಡಿ. ಈಗ ಮುಂದಿನ ಪ್ರಶ್ನೆ ಸಿದ್ದು ಸವದಿಯವರು ಪ್ರಶ್ನೆ ಕೇಳಬೇಕು.